# KANNADA-015

# SAMPLE QUESTION PAPER

# CLASS - X

# 2025 – 2026

**TIME: 3 HOURS** **MARKS: 80**

---

**ಸೂಚನೆಗಳು:**

- ಈ ಪ್ರಶ್ನೆಪತ್ರಿಕೆಯಲ್ಲಿ ಒಟ್ಟು 15 ಮುಖ್ಯ ಪ್ರಶ್ನೆಗಳಿರುತ್ತವೆ.
- ಈ ಪ್ರಶ್ನೆ ಪತ್ರಿಕೆಯು **PART – 1** & **PART – 2** ಎಂಬ ಎರಡು ಭಾಗಗಳನ್ನು ಮತ್ತು A B C D ಎಂಬ ನಾಲ್ಕು ವಿಭಾಗಗಳನ್ನು ಒಳಗೊಂಡಿರುತ್ತವೆ.
- **PART – 1 SECTION -A** ನಲ್ಲಿ ಒಟ್ಟು 4 ಮುಖ್ಯ ಪ್ರಶ್ನೆಗಳು, 10 ಬಹು ಆಯ್ಕೆಯ ಉಪ-ಪ್ರಶ್ನೆಗಳು ಮತ್ತು ಬರವಣಿಗೆಯ 10 ಪ್ರಶ್ನೆಗಳಿರುತ್ತವೆ.
- **PART – 1 SECTION -B** ಅನ್ವಯಿಕ ವ್ಯಾಕರಣದಲ್ಲಿ 10 ಬಹುಆಯ್ಕೆಯ ಪ್ರಶ್ನೆಗಳು, 5 ಬರವಣಿಗೆಯ ಪ್ರಶ್ನೆಗಳು ಮತ್ತು ಪಠ್ಯಪೂರಕದ 5 ಬಹು ಆಯ್ಕೆ ಪ್ರಶ್ನೆಗಳಿಗೆ ಉತ್ತರಿಸಬೇಕು.
- **PART – 2 -SECTION - C** (ಬರವಣಿಗೆ ಕೌಶಲ್ಯ) ಯಲ್ಲಿರುವ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಬೇಕು.
- **PART – 2 -SECTION - B** (ಪಠ್ಯಗಳ ಅಧ್ಯಯನ) ಯಲ್ಲಿರುವ 11 ರಿಂದ 15 ಮುಖ್ಯ ಪ್ರಶ್ನೆಗಳಿಗೆ ಅಲ್ಲಿ ಕೊಟ್ಟಿರುವ ಸೂಚನೆಯಂತೆ ಉತ್ತರಿಸಬೇಕು.

| | | |
|---|---|---|
| PART – 1<br>(40 ಅಂಕಗಳು) | ವಾಚನ ಮತ್ತು ಗ್ರಹಿಕಾ ಕೌಶಲ್ಯ | 20 ಅಂಕಗಳು |
| | ಅನ್ವಯಿಕ ವ್ಯಾಕರಣ | 15 ಅಂಕಗಳು |
| | ಬಹು ಆಯ್ಕೆಪ್ರಶ್ನೆ- ಪಠ್ಯಗಳ ಅಧ್ಯಯನ | 05 ಅಂಕಗಳು |
| PART – 2<br>(40 ಅಂಕಗಳು) | ಬರವಣಿಗೆ ಕೌಶಲ್ಯ | 12 ಅಂಕಗಳು |
| | ಪಠ್ಯಗಳ ಅಧ್ಯಯನ | 28 ಅಂಕಗಳು |
| | ಒಟ್ಟು ಅಂಕಗಳು | 80 ಅಂಕಗಳು |

**PART – 1 (40 ಅಂಕಗಳು)**

**SECTION -A**

**(ವಾಚನ ಮತ್ತು ಗ್ರಹಿಕಾ ಕೌಶಲ್ಯ) = 20 ಅಂಕಗಳು.**

1. **ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 5X1=5**

ನಾಡಿಗೆ ಮತ್ತು ರಾಷ್ಟ್ರಕ್ಕೆ ತನ್ನೊಡಲ ಚಿನ್ನವನ್ನು ಧಾರೆಯೆರೆದು 'ಚಿನ್ನದ ಜಿಲ್ಲೆ' ಎಂದೇ ಹೆಸರಾಗಿದ್ದ ಕೋಲಾರ ಜಿಲ್ಲೆಯು ನಾಡಿನ ಕೃಷಿ, ಸಾಹಿತ್ಯ, ರಾಜಕೀಯ ಹಾಗೂ ವಿಜ್ಞಾನ ತಂತ್ರಜ್ಞಾನ ಕ್ಷೇತ್ರಗಳಿಗೆ ವಿಶಿಷ್ಟ ಕೊಡುಗೆ ನೀಡಿದ ಗೌರವಕ್ಕೆ ಪಾತ್ರವಾಗಿದೆ. ಸಿಲ್ಕ್ ಅಂಡ್ ಮಿಲ್ಕ್, ಹಣ್ಣು ಮತ್ತು ತರಕಾರಿಗಳ ರಾಜಧಾನಿ ಎನಿಸಿರುವ ಕೋಲಾರ ಜನಪರ ಹೋರಾಟಗಳು ಮತ್ತು ಜನಪರ ಸಂಸ್ಕೃತಿಯನ್ನು ಮೆರೆದಿದೆ . ಆಗಸ್ಟ್ ೨೦೦೭ರಂದು ಚಿಕ್ಕಬಳ್ಳಾಪುರ ಉಪವಿಭಾಗವು ಸ್ವತಂತ್ರ ಜಿಲ್ಲೆಯಾಗಿ ಕೋಲಾರದಿಂದ ವಿಭಜನೆ ಹೊಂದಿದೆ.ಕೋಲಾರ ಜಿಲ್ಲೆಯ ಮುಖ್ಯ ಕಸುಬುಗಳೆಂದರೆ ಕೃಷಿ, ಪಶು ಸಾಕಾಣಿಕೆ ಹಾಗೂ ರೇಷ್ಮೆ ಉದ್ಯಮ.

ಗಂಗರ ರಾಜಧಾನಿಯಾಗಿದ್ದ ಕೋಲಾರ ನಗರದಲ್ಲಿ ಕಲೆ, ಸಂಸ್ಕೃತಿಗಳ ಸಾಕಾರರೂಪ ತಳೆದ ಸ್ಮಾರಕಗಳಿದ್ದು, ನಗರದ ಪೂರ್ವಕ್ಕೆ ಇರುವ ಕೋಲಾರಮ್ಮ ದೇವಾಲಯ ಶಿಲ್ಪ ಕಲೆಯು ಉತ್ತಮ ಉದಾಹರಣೆ. ಲಂಬಕೋನಾಕೃತಿಯ ವಾಸ್ತು ಶಿಲ್ಪವನ್ನು ಹೊಂದಿರುವ ಜೋಡಿ ಮಂದಿರಗಳಿಂದ ಕೂಡಿದ ಸಾವಿರ ವರ್ಷಗಳ ಹಿಂದಿನ ಈ ಅಲಯಕ್ಕೆ ಒಂದೇ ಮುಖಮಂಟಪವಿರುವುದು ವೈಶಿಷ್ಟ್ಯ.ಉತ್ತರ ದೇವಮಂದಿರದಲ್ಲಿ ದಕ್ಷಿಣ ದಿಕ್ಕಿಗೆ ಮುಖ ಮಾಡಿರುವ ಶಕ್ತಿ ಸ್ವರೂಪಿಣಿ ಚಾಮುಂಡೇಶ್ವರಿ, ನಗರಾಧೀದೇವತೆ ಕೋಲಾರಮ್ಮ ಆಗಿದ್ದಾಳೆ. ಅಲ್ಲಿಯೇ ಕಲ್ಲಿನ ಸಪ್ತಮಾತೃಕೆಯರು, ಶ್ರೀ ಚಕ್ರವಿದೆ. ದಕ್ಷಿಣದ ದೇವಮಂದಿರದಲ್ಲಿ ಸಪ್ತಮಾತೃಕೆಯರ ಬೃಹತ್ ಮೃತ್ತಿಕಾ (ಗಾರೆ) ವಿಗ್ರಹಗಳಿವೆ ನೆರಳಿನಲ್ಲಿ ಮೂರು ಮುಖ ತೋರುವ ವಿಶಿಷ್ಟ ಕರ್ಣ ಗಣಪತಿ ವಿಗ್ರಹ ಶಿಲ್ಪಿಯ ಚಮತ್ಕಾರ ತೋರುತ್ತದೆ. ಹಲವು ತಮಿಳು, ಕನ್ನಡ ಶಾಸನಗಳು ಇಲ್ಲಿದೆ.

ಕೋಲಾರ ನಗರದ ಪಶ್ಚಿಮಕ್ಕೆ ಮೂರು ಕಿಲೋಮೀಟರ್ ದೂರದಲ್ಲಿ ಶತಶೃಂಗ ಪರ್ವತ ಶ್ರೇಣಿಯಲ್ಲಿರುವ ಅಂತರಗಂಗೆ ಚೆಲುವಿನ ತಾಣವಾಗಿದೆ. ಇಲ್ಲಿರುವ ಬಸವಣ್ಣನ ಬಾಯಿಯಿಂದ ಸದಾ ಹೊರ ಹೊಮ್ಮುವ ಜಲಧಾರೆ ವಿಜ್ಞಾನ ವಿಸ್ಮಯವಾಗಿದೆ. ಶೃಂಗದ ಬೆಟ್ಟ ಗುಡ್ಡ, ಬಂಡೆಗಳು ಹಲವು ಆಕಾರಗಳನ್ನು ಪಡೆದಿದ್ದು, ಶಿಖರದಲ್ಲಿರುವ ಹಾವಿನಹೆಡೆ ಆಕಾರದ ಬಂಡೆಯಿಂದ ಏಳು ಹಳ್ಳಿಗಳ ಪಕ್ಷಿನೋಟ ಕಾಣಬಹುದಾಗಿದೆ.ಚಾರಣಪ್ರಿಯರ ಸ್ವರ್ಗವಾಗಿರುವ ಅಂತರಗಂಗೆ ಪ್ರದೇಶ ಹಲವು ಐತಿಹಾಸಿಕ ಗುಹೆಗಳನ್ನು ಬಳಗೊಂಡಿದೆ.

ಕೋಲಾರಮ್ಮ ದೇವಾಲಯ ಸಮೀಪ ದ್ರಾವಿಡ ಶೈಲಿಗೆ ಉತ್ತಮ ಮಾದರಿಯಾದ ಶಿಲ್ಪಕಲೆ ವೈವಿಧ್ಯ ತೋರಿದ ಸುಂದರ ಸೋಮೇಶ್ವರ ದೇವಾಲಯವಿದೆ. ಪ್ರತ್ಯೇಕ ಕಲ್ಯಾಣ ಮಂಟಪ, ಗರ್ಭಗೃಹ, ಅಂತರಾಳ, ನವರಂಗಗಳು ಕಲೆಗಾರಿಕೆಯ ಹೊರ ಮೈ ಹೊಂದಿದೆ. ಒಳಗಿನ ಕಂಬಗಳ ಮೇಲಿನ ಕೆತ್ತನೆ ನೋಡಿದಾಗ ಇದೊಂದು ಉತ್ತುಂಗವಾದ ರಾಜತಾಂತ್ರಿ ವಿಗ್ರಹವಿದೆ. ದೇಗುಲದ ಬಲಪಾರ್ಶ್ವದಲ್ಲಿ ಆಕರ್ಷಕ ಕೆತ್ತನೆಗಳಿಂದ ಕೂಡಿದ ಕಲ್ಯಾಣ ಮಂಟಪವಿದೆ ಆಲಯದ ಕಂಬಗಳಲ್ಲಿ ಹಲವು ಉಬ್ಬು ಚಿತ್ರಗಳನ್ನು ಕಾಣಬಹುದಾಗಿದೆ ಈಶಾನ್ಯದ ವಸಂತಮಂಟಪದ ಛಾವಣಿಯಲ್ಲಿ ಅಷ್ಟದಿಕ್ಪಾಲಕರ ವಿಗ್ರಹಗಳು ಆಕರ್ಷಕವಾಗಿದೆ.

ಕೆ.ಜಿ.ಎಫ್ ಅಥವಾ ಕೋಲಾರ ಗೋಲ್ಡ್ ಫೀಲ್ಡ್ (ಕೆ.ಜಿ.ಎಫ್) ಕರ್ನಾಟಕ ರಾಜ್ಯದ ಕೋಲಾರ ಜಿಲ್ಲೆಯ ಗಣಿಗಾರಿಕೆ ಪ್ರದೇಶ ಮತ್ತು ತಾಲ್ಲೂಕು ರಾಬರ್ಟ್ ಸನ್ ಪೇಟೆ ಎಂಬುದು ಕೋಲಾರ ಗೋಲ್ಡ್ ಫೀಲ್ಡ್ ಪ್ರಧಾನ ಕಛೇರಿಯಾಗಿದೆ ಇದು ಆದೇ ಹೆಸರಿನ ಪಟ್ಟಣವನ್ನು ಒಳಗೊಂಡಿದೆ. ಅಂದರೆ ಕೆ.ಜಿ.ಎಫ್ ಮುಖ್ಯವಾಗಿ ಭಾರತ್ ಗೋಲ್ಡ್ ಮೈನ್ಸ್ ಲಿಮಿಡೆಟ್(ಬಿಜಿಎಂಎಲ್) ಮತ್ತು ಬಿಇಎಂಎಲ್( ಭಾರತ್ ಅರ್ಥ್ ಮೂವರ್ಸ್ ಲಿಮಿಡೆಟ್) ನೌಕರರ ಕುಟುಂಬಗಳಲ್ಲಿ ನೆಲೆಸಿದೆ. ಕೋಲಾರದಿಂದ 30 ಕಿಲೋಮೀಟರ್ ಮತ್ತು ಬೆಂಗಳೂರಿನಿಂದ 100 ಕಿ.ಮೀ ಕೆ.ಜಿ.ಎಫ್ ಪೂರ್ವಕ್ಕೆ ಬೆಟ್ಟಗಳ ಪರ್ವತವು ಸಮುದ್ರ ಮಟ್ಟದಿಂದ 3195 ಅಡಿಗಳಷ್ಟು ಇದ್ದು, ದೊಡ್ಡಬೆಟ್ಟದ ಪ್ರದೇಶಗಳದಲ್ಲಿದೆ. ಈ ಪಟ್ಟಣವು ಒಂದು ಶತಮಾನಕ್ಕೂ ಹೆಚ್ಚು ಕಾಲ ಚಿನ್ನ ಗಣಿಗಾರಿಗೆ ಹೆಸರುವಾಸಿಯಾಗಿದ್ದು, 2001 ರಲ್ಲಿ ಕಡಿಮೆ ಮಟ್ಟದಲ್ಲಿ ಚಿನ್ನದ ಉತ್ಪಾದನೆಯಿಂದ ಮುಚ್ಚಲ್ಪಟ್ಟಿತು.1900ರ ದಶಕದ ಆರಂಭದಲ್ಲಿ ಕೆ.ಜಿ.ಎಫ್ ಕಾರ್ಯಚರಣೆಯನ್ನು ಬೆಂಬಲಿಸಲು ಭಾರತದ ಮೊದಲ ವಿದ್ಯುತ್ ಉತ್ಪಾದನಾ ಘಟಕವನ್ನು ರಚಿಸಲಾಯಿತು..

**ಪ್ರಶ್ನೆಗಳು:**

**I. ಕೋಲಾರ ಜಿಲ್ಲೆಯ ಪ್ರಮುಖ ಕಸುಬುಗಳೆಂದರೆ _________**

A. ಕೃಷಿ, ಮೀನುಗಾರಿಕೆ ಹಾಗೂ ರೇಷ್ಮೆ ಉದ್ಯಮ.

B. ಜೇನು ಸಾಕಾಣಿಕೆ, ಪಶು ಸಾಕಾಣಿಕೆ ಹಾಗೂ ರೇಷ್ಮೆ ಉದ್ಯಮ.

C. ಕೃಷಿ, ಪಶು ಸಾಕಾಣಿಕೆ ಹಾಗೂ ಅಣಬೆ ಕೃಷಿ

D. ಕೃಷಿ, ಪಶು ಸಾಕಾಣಿಕೆ ಹಾಗೂ ರೇಷ್ಮೆ ಉದ್ಯಮ.

**II.** ಕೋಲಾರ ಜಿಲ್ಲೆಯ ನಗರಾಧಿದೇವತೆ __________

A. ಚಾಮುಂಡೇಶ್ವರಿ

B. ಸಪ್ತ ಮಾತೃಕೆಯರು

C. ಸರಸ್ವತಿ

D. ಗಣಪತಿ

**III**. ಕೋಲಾರ ಜಿಲ್ಲೆಯ ________ ದೇಗುಲದಲ್ಲಿ ತಮಿಳಿನ ಶಾಸನಗಳು ಕಂಡು ಬರುತ್ತವೆ.

A. ಅಂತರಗಂಗೆ

B. ಸೋಮೇಶ್ವರ

C. ಕೋಲಾರಮ್ಮ

D. ವಸಂತ ಮಂಟಪ

**IV.** ವಿಜ್ಞಾನಕ್ಕೆ ವಿಸ್ಮಯವಾಗಿ ಬಸವಣ್ಣನ ಬಾಯಿಯಿಂದ ಸದಾ ಹೊರ ಹೊಮ್ಮುವ ಜಲಧಾರೆ ______

A. ಕೋಲಾರ ಗೋಲ್ಡ್ ಫೀಲ್ಡ್

B. ಅಂತರಗಂಗೆ

C. ಚಿನ್ನದಧಾರೆ

D. ಶೃಂಗದ ಬೆಟ್ಟಗುಡ್ಡ

**V.** ಕೋಲಾರದ ಚಿನ್ನದ ಗಣಿಯನ್ನು ಮುಚ್ಚಲು ಕಾರಣ ________

ಹೇಳಿಕೆ-1 ಸೂಕ್ತ ವಿದ್ಯುತ್ ಸರಬರಾಜು ಇಲ್ಲದ ಕಾರಣ

ಹೇಳಿಕೆ-2 ಕಡಿಮೆ ಮಟ್ಟದಲ್ಲಿ ಚಿನ್ನದ ಉತ್ಪಾದನೆಯಾಗುತ್ತಿದ್ದುದರಿಂದ.

ಹೇಳಿಕೆ-3 ನೌಕರರ ಕುಟುಂಬಗಳು ಅಲ್ಲೇ ಬೀಡುಬಿಟ್ಟಿದ್ದರಿಂದ

A. ಮೂರು ಹೇಳಿಕೆಗಳು ಸರಿಯಾಗಿವೆ.

B. 1 ಮತ್ತು 3 ನೆಯ ಹೇಳಿಕೆಗಳು ಮಾತ್ರ ಸರಿಯಾಗಿವೆ.

C. ಮೂರು ಹೇಳಿಕೆಗಳು ತಪ್ಪಾಗಿವೆ.

D. 2 ನೆಯ ಹೇಳಿಕೆ ಮಾತ್ರ ಸರಿಯಾಗಿದೆ.

2. **ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 5X1=5**

ಯೋಗದ ವಿಜ್ಞಾನವು ಕೆಲವು ಸಾವಿರ ವರ್ಷಗಳ ಹಿಂದೆ ಯಾವುದೇ ಧರ್ಮ ಮತ್ತು ನಂಬಿಕೆ ವ್ಯವಸ್ಥೆಗಳು ಹುಟ್ಟುವ ಮುಂಚೆಯೇ ಅದರ ಮೂಲವನ್ನು ಹೊಂದಿದೆ ಮತ್ತು ಯೋಗದ ಅಭ್ಯಾಸವು ನಾಗರಿಕತೆಯ ಮುಂಜಾನೆಯಿಂದ ಪ್ರಾರಂಭವಾಯಿತು ಎಂದು ನಂಬಲಾಗಿದೆ. ಯೋಗದ ದಂತಕಥೆಯಲ್ಲಿ, ಶಿವನನ್ನು ಮುಖ್ಯ ಯೋಗಿ ಅಥವಾ ಆದಿಯೋಗಿ ಮತ್ತು ಪ್ರಧಾನ ಗುರು ಅಥವಾ ಆದಿ ಗುರು ಎಂದು ನೋಡಲಾಗುತ್ತದೆ.

ಕೆಲವು ಸಾವಿರ ವರ್ಷಗಳ ಹಿಂದೆ, ಹಿಮಾಲಯದ ಕಾಂತಿಸರೋವರ ಆ ಸರೋವರದ ದಡದಲ್ಲಿ, ಆದಿಯೋಗಿ ತನ್ನ ಮಹತ್ವದ ಜ್ಞಾನವನ್ನು ಪೌರಾಣಿಕ ಸಪ್ತ ಋಷಿಗಳು ಅಥವಾ "ಏಳು ಋಷಿಗಳಿಗೆ" ಸುರಿದರು. ಋಷಿಗಳು ಈ ಪರಿಣಾಮಕಾರಿ ಯೋಗ ವಿಜ್ಞಾನವನ್ನು ಏಷ್ಯಾ, ಮಧ್ಯಪ್ರಾಚ್ಯ, ಉತ್ತರ ಆಫ್ರಿಕಾ ಮತ್ತು ದಕ್ಷಿಣ ಅಮೇರಿಕಾ ಸೇರಿದಂತೆ ಪ್ರಪಂಚದ ವಿವಿಧ ಭಾಗಗಳಿಗೆ ಕೊಂಡೊಯ್ದರು. ಕುತೂಹಲಕಾರಿಯಾಗಿ, ಇಂದಿನ ಸಂಶೋಧಕರು ಪ್ರಪಂಚದಾದ್ಯಂತ ಪ್ರಾಚೀನ ಸಮಾಜಗಳ ನಡುವೆ ಕಂಡುಬರುವ ಹತ್ತಿರದ ಸಮಾನಾಂತರಗಳನ್ನು ಗಮನಿಸಿದ್ದಾರೆ ಮತ್ತು ಆಶ್ಚರ್ಯಪಟ್ಟಿದ್ದಾರೆ. ಆದಾಗ್ಯೂ, ಯೋಗದ ಚೌಕಟ್ಟು ಅದರ ಸಂಪೂರ್ಣ ಅಭಿವ್ಯಕ್ತಿಯನ್ನು ಕಂಡುಹಿಡಿದದ್ದು ಭಾರತದಲ್ಲಿ. ಭಾರತೀಯ ಉಪಖಂಡದಾದ್ಯಂತ ಪ್ರಯಾಣಿಸಿದ ಸಪ್ತ ಋಷಿಯಾದ ಅಗಸ್ತ್ಯರು ಈ ಸಂಸ್ಕೃತಿಯನ್ನು ಒಂದು ಪ್ರಮುಖ ಯೋಗದ ಜೀವನಶೈಲಿಯ ಸುತ್ತಲೂ ಮಾಡಿದರು.

ಯೋಗದ ಚಿಂತನೆಯ ಪ್ರಕ್ರಿಯೆಗಳೊಂದಿಗೆ ಸಿಂಧೂ ಸರಸ್ವತಿ ಕಣಿವೆಯ ನಾಗರೀಕತೆಯ ಮುದ್ರೆಗಳು ಮತ್ತು ಪಳೆಯುಳಿಕೆ ಅವಶೇಷಗಳ ಸಂಖ್ಯೆ ಮತ್ತು ಯೋಗ ಸಾಧನಾ ಮಾಡುವ ವ್ಯಕ್ತಿಗಳು ಪ್ರಾಚೀನ ಭಾರತದಲ್ಲಿ ಯೋಗದ ಉಪಸ್ಥಿತಿಯನ್ನು ಪ್ರತಿಪಾದಿಸುತ್ತವೆ. ಫಾಲಿಕ್ ಚಿಹ್ನೆಗಳು, ಮಾತೃದೇವತೆಯ ವಿಗ್ರಹಗಳ ಮುದ್ರೆಗಳು ತಂತ್ರ ಯೋಗವನ್ನು ಸೂಚಿಸುತ್ತವೆ. ಯೋಗದ ಉಪಸ್ಥಿತಿಯು ಜಾನಪದ ಸಂಪ್ರದಾಯಗಳು, ಸಿಂಧೂ ಕಣಿವೆಯ ನಾಗರಿಕತೆ, ವೈದಿಕ ಮತ್ತು ಉಪನಿಷತ್ತಿನ ಪರಂಪರೆ, ಬೌದ್ಧ ಮತ್ತು ಜೈನ ಪದ್ಧತಿಗಳು, ದರ್ಶನಗಳು, ಮಹಾಭಾರತ ಮತ್ತು ರಾಮಾಯಣದ ಕಥೆಗಳು, ಶೈವ, ವೈಷ್ಣವ ಮತ್ತು ತಾಂತ್ರಿಕ ಪದ್ಧತಿಗಳ ಅತೀಂದ್ರಿಯ ಪದ್ಧತಿಗಳಲ್ಲಿ ಪ್ರವೇಶಿಸಬಹುದಾಗಿದೆ. ಇದಲ್ಲದೆ, ದಕ್ಷಿಣ ಏಷ್ಯಾದ ಅತೀಂದ್ರಿಯ ಪದ್ಧತಿಗಳಲ್ಲಿ ತೋರಿಸಲ್ಪಟ್ಟಿರುವ ಒಂದು ಆದಿಸ್ವರೂಪದ ಅಥವಾ ಕಲಬೆರಕೆಯಿಲ್ಲದ ಯೋಗವಿತ್ತು.

**ಪ್ರಶ್ನೆಗಳು:**

I. ಯೋಗದ ದಂತಕಥೆಯಲ್ಲಿ ಶಿವನನ್ನು _______ಆಗಿ ನೋಡಲಾಗುತ್ತದೆ.

A. ಯೋಗಿ, ಪ್ರಶಾಂತಯೋಗಿ, ರೌದ್ರಯೋಗಿ,ಮೌನಯೋಗಿ
B. ಯೋಗಿ, ಕ್ರೋಧಯೋಗಿ, ರುಂಡಯೋಗಿ, ಕಮಂಡಲಯೋಗಿ
C. ಬೈರಾಗಿ, ಸಂತಯೋಗಿ, ಕಾರುಣ್ಯಯೋಗಿ, ಕರುಣಯೋಗಿ
D. ಯೋಗಿ, ಆದಿಯೋಗಿ, ಪ್ರಧಾನ ಗುರು, ಆದಿಗುರು

II. ಆದಿಯೋಗಿ ತನ್ನ ಮಹತ್ವದ ಜ್ಞಾನವನ್ನು ________________ಸುರಿದರು.

A. ಐತಿಹಾಸಿಕ ಸಪ್ತ ಋಷಿಗಳಿಗೆ
B. ಆಧ್ಯಾತ್ಮದ ಸಪ್ತ ಋಷಿಗಳಿಗೆ
**C. ಪೌರಾಣಿಕ ಸಪ್ತಋಷಿಗಳಿಗೆ**
D. ಅಲೆಮಾರಿ ಋಷಿಗಳಿಗೆ

III. ಕೆಳಗೆ ಕೊಟ್ಟಿರುವ ಹೇಳಿಕೆಗಳನ್ನು ಓದಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

ಹೇಳಿಕೆ-1 ಸಪ್ತಋಷಿಗಳು ಯೋಗ ವಿಜ್ಞಾನವನ್ನು ಏಷ್ಯಾ, ಮಧ್ಯಪ್ರಾಚ್ಯ, ಉತ್ತರ ಆಫ್ರಿಕಾ ಮತ್ತು ದಕ್ಷಿಣ ಅಮೇರಿಕಾ ಸೇರಿದಂತೆ ಪ್ರಪಂಚದ ವಿವಿಧ ಭಾಗಗಳಿಗೆ ಕೊಂಡೊಯ್ದರು.

ಹೇಳಿಕೆ-2 ಅಗಸ್ತ್ಯರು ಸಪ್ತಋಷಿಗಳಲ್ಲಿ ಒಬ್ಬರು.

ಹೇಳಿಕೆ-3 ಫಾಲಿಕ್ ಚಿಹ್ನೆಗಳು, ಮಾತೃದೇವತೆಯ ವಿಗ್ರಹಗಳ ಮುದ್ರೆಗಳು ತಂತ್ರ ಯೋಗವನ್ನು ಸೂಚಿಸುತ್ತವೆ.

A. ಒಂದನೆ ಹೇಳಿಕೆ ಮಾತ್ರ ಸರಿಯಾಗಿದೆ.

B. ಎರಡನೆ ಹೇಳಿಕೆ ಮಾತ್ರ ಸರಿಯಾಗಿದೆ.

C. ಮೂರು ಹೇಳಿಕೆಗಳು ಸರಿಯಾಗಿವೆ.

D. ಮೊದಲೆರಡು ಹೇಳಿಕೆಗಳು ತಪ್ಪಾಗಿವೆ.

IV. ಯಾವ ನಾಗರೀಕತೆಯ ಮುದ್ರೆಗಳು ಮತ್ತು ಪಳೆಯುಳಿಕೆ ಅವಶೇಷಗಳ ಸಂಖ್ಯೆ ಮತ್ತು ಯೋಗ ಸಾಧನಾ ಮಾಡುವ ವ್ಯಕ್ತಿಗಳು ಪ್ರಾಚೀನ ಭಾರತದಲ್ಲಿ ಯೋಗದ ಉಪಸ್ಥಿತಿಯನ್ನು ಪ್ರತಿಪಾದಿಸುತ್ತವೆ.

A. ಏಷ್ಯಾ, ಮಧ್ಯಪ್ರಾಚ್ಯ

B. ದಕ್ಷಿಣ ಅಮೆರಿಕಾ

C. ಸಿಂಧೂ ಸರಸ್ವತಿ ಕಣಿವೆಯ

D. ಉತ್ತರ ಆಫ್ರಿಕಾ

V. ದಕ್ಷಿಣ ಏಷ್ಯಾದ ಅತೀಂದ್ರಿಯ ಪದ್ಧತಿಗಳಲ್ಲಿ ತೋರಿಸಲ್ಪಟ್ಟಿರುವ ಯೋಗ ________

A. ಆದಿಸ್ವರೂಪ

B. ಮುದ್ರೆಗಳು

C. ತಂತ್ರಗಳು

D. ಮಂತ್ರಗಳು

3. ಕೆಳಗೆ ಕೊಟ್ಟಿರುವ **ದೇವನೂರು ಮಹಾದೇವ** ಅವರು ಬರೆದಿರುವ **'ಎದೆಗೆ ಬಿದ್ದ ಅಕ್ಷರ'** ಎಂಬ ಪರಿಚಿತ ಗದ್ಯಭಾಗವನ್ನು ಓದಿಕೊಂಡು, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಬುದ್ಧನ ಕಾರುಣ್ಯ ನನ್ನ ಮನದೊಳಗೆ ಕೂತ ಬಗೆಯನ್ನು ಒಂದು ಉದಾಹರಣೆಯಿಂದ ಹೇಳಲು ಪ್ರಯತ್ನಿಸುವೆ.

ಇತ್ತೀಚೆಗೆ ಶಿವಮೊಗ್ಗದ ಡಾ. ಅಶೋಕ ಪೈ(ಮನೋವೈದ್ಯರು) ಅವರು ಮೈಸೂರಿಗೆ ಬಂದಿದ್ದರು. ಅವರು ಮನಸ್ಸಿನ ಬಗ್ಗೆ ನಡೆದಿರುವ ಒಂದು ಸಂಶೋಧನಾ ಸತ್ಯವನ್ನು ಹೇಳಿದರು. ಏನೆಂದರೆ- ಕೆಲವು ಜನ ಒಂದು ಕೊಠಡಿಯಲ್ಲಿ ಕುಳಿತು ಟೆಲಿವಿಷನ್ ನೋಡುತ್ತಿದ್ದಾರೆ ಎಂದಿಟ್ಟುಕೊಳ್ಳೋಣ. ಇನ್ನೊಂದಿಷ್ಟು ಜನ ಇದರ ಅರಿವಿಲ್ಲದೆ ಇನ್ನೊಂದು ಪಕ್ಕದ ಕೊಠಡಿಯಲ್ಲಿ ಏನೋ ಮಾತುಕತೆಯಾಡುತ್ತ ತಮ್ಮಿಷ್ಟಕ್ಕೆ ತಾವಿರುವರು ಎಂದಿಟ್ಟುಕೊಳ್ಳೋಣ. ಆಗ ಟೆಲಿವಿಷನ್‌ನಲ್ಲಿ ಯಾವುದಾದರೂ ಕೊಲೆ ದೃಶ್ಯ ಬಂದಾಗ ಇಲ್ಲಿ ಇದನ್ನು ನೋಡಿತ್ತಿದ್ದವರ ದುಃಖದ ಭಾವನೆಯು ಇದನ್ನು ನೋಡದೆ ಇರುವ ಪಕ್ಕದ ಕೊಠಡಿಯಲ್ಲಿ ಇರುವವರ ಮನಸ್ಸಿಗೂ ಮುಟ್ಟಿ ಅವರ ಮನಸ್ಸು ಸ್ವಲ್ಪಮಟ್ಟಿಗೆ ದುಗುಡಗೊಳ್ಳುತ್ತದಂತೆ. ಅದೇ ಟೆಲಿವಿಷನ್‌ನಲ್ಲಿ ಯಾವುದಾದರೂ ನೃತ್ಯ ದೃಶ್ಯ ಬಂದಾಗ ಅದನ್ನು ನೋಡುತ್ತಿದ್ದವರ ಖುಷಿ ಭಾವನೆಯು ಪಕ್ಕದ ಕೊಠಡಿಯಲ್ಲಿ ಇದನ್ನು ನೋಡದ ತಮ್ಮಷ್ಟಕ್ಕೆ ತಾವೇ ಇದ್ದವರ ಮನಸ್ಸಿನ ಮೇಲೂ ಪರಿಣಾಮ ಮಾಡಿ ಸ್ವಲ್ಪ ಮಟ್ಟಿಗೆ ಸಂತೋಷದ ಭಾವನೆ ಉಂಟಾಗುವುದಂತೆ.

ಈ ನಿಜ ಏನನ್ನು ಹೇಳುತ್ತದೆ? ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ ಎಂದು ಹೇಳುತ್ತದೆ. ಯಾವುದೇ ಒಂದು ಜೀವಿಗೆ ಆಗುವ ದುಃಖ ದುಮ್ಮಾನ ಪರಿಸರದಲ್ಲಿ ಉಸಿರಾಡುತ್ತ ಎಲ್ಲಾ ಜೀವಿಗಳಲ್ಲೂ ಕಂಪನ ಉಂಟು ಮಾಡುತ್ತಿರುತ್ತದೆನೊ. ಈ ಅನುಕಂಪನ ಇಡೀ ಜೀವಸಂಕುಲವನ್ನೇ ಒಂದು ಎಂದು ಹೇಳುತ್ತದೆ.

ಬುದ್ಧನ ಕಾರುಣ್ಯ ಇಲ್ಲಿಂದಲೇ ಮೂಡಿರಬಹುದು.

ಕೊಲೆ ಸುಲಿಗೆ ದ್ವೇಷ ಅಸೂಯೆಗಳಿಂದ ಕ್ಷೋಭೆಗೊಂಡು ನರಳುತ್ತಿರುವ ಜಗತ್ತು- ಅದು ಘಾಸಿಗೊಳಿಸುವುದು- ತನ್ನ ಆಳದ ಒಳ ಸಮಷ್ಟಿ ಮನಸ್ಸೆ. ಈ ಸಮಷ್ಟಿ ಮನಸ್ಸಲ್ಲಿ ಎಲ್ಲರೂ ಇರುತ್ತಾರೆ.

ನಾವು ಮನುಷ್ಯರು ನಮ್ಮೊಳಗೆ ಮೂರ್ಛಾವಸ್ಥೆಯಲ್ಲಿರುವ ಕಾರುಣ್ಯವನ್ನು ಎಚ್ಚರಗೊಳಿಸಬೇಕಾಗಿದೆ. ಈ ಎಳೆ ಹಿಡಿದು ಜಾಗತೀಕರಣವನ್ನೂ ರೂಪಿಸಬೇಕಾಗಿದೆ. ಆಗ ಮಾತ್ರವೇ ಅದು ಜಾಗತೀಕರಣ.

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **5x1=5**

I. ಡಾ. ಅಶೋಕ ಪೈ ಅವರು ಯಾವ ಸಂಶೋಧನಾ ಸತ್ಯವನ್ನು ಹೇಳಿದರು?
II. ಕೊಲೆ ದೃಶ್ಯವನ್ನು ನೋಡುತ್ತಿದ್ದವರ ಮನಸ್ಸಿನಲ್ಲಿ ಯಾವ ಭಾವನೆ ಉಂಟಾಗುತ್ತದೆ?
III. ಟೆಲಿವಿಷನ್ ನೋಡುತ್ತಿದ್ದವರಿಗೆ ಖುಷಿ ಭಾವನೆ ಯಾವಾಗ ಉಂಟಾಗುತ್ತದೆ?
IV. ಲೇಖಕರ ಪ್ರಕಾರ ಬುದ್ಧನ ಕಾರುಣ್ಯ ಎಲ್ಲಿಂದ ಮೂಡಿರಬಹುದು?
V. ಮನುಷ್ಯರು ಏನನ್ನು ಎಚ್ಚರಗೊಳಿಸಬೇಕು?

**4.** ಕೆಳಗೆ ಕೊಟ್ಟಿರುವ **ಕುವೆಂಪು** ಅವರು ಬರೆದಿರುವ **'ಹಸುರು'** ಎಂಬ ಪರಿಚಿತ ಪದ್ಯಭಾಗವನ್ನು ಓದಿಕೊಂಡು, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

**ಹಸುರು**

ನವರಾತ್ರಿಯ ನವಧಾತ್ರಿಯ
ಈ ಶ್ಯಾಮಲ ವನಧಿಯಲಿ
ಹಸುರಾದುದೊ ಕವಿಯಾತ್ಮಂ
ರಸಪಾನ ಸ್ನಾನದಲಿ!

ಹಸುರಾಗಸ; ಹಸುರು ಮುಗಿಲು;
ಹಸುರು ಗದ್ದೆಯಾ ಬಯಲು;
ಹಸುರಿನ ಮಲೆ; ಹಸುರು ಕಣಿವೆ;
ಹಸುರು ಸಂಜೆಯೀ ಬಿಸಿಲೂ!

ಅಶ್ವೀಜದ ಶಾಲಿವನದ
ಗಿಳಿಯೆದೆ ಬಣ್ಣದ ನೋಟ;
ಅದರೆಡೆಯಲಿ ಬನದಂಚಲಿ
ಕೊನೆವೆತ್ತಡಕೆಯ ತೋಟ!

ಅದೊ ಹುಲ್ಲಿನ ಮಕಮಲ್ಲಿನ
ಪೊಸಪಚ್ಚೆಯ ಜಮಖಾನೆ
ಪಸರಿಸಿ ತಿರೆ ಮೈ ಮುಚ್ಚಿರೆ
ಬೇರೆ ಬಣ್ಣವನೆ ಕಾಣೆ!

ಹೊಸ ಹೂವಿನ ಕಂಪು ಹಸುರು,
ಎಲರಿನ ತಂಪೂ ಹಸುರು!

ಹಕ್ಕಿಯ ಕೊರಲಿಂಪು ಹಸುರು!
ಹಸುರು ಹಸುರಿಳೆಯುಸಿರೂ!

ಹಸುರತ್ತಲ್! ಹಸುರಿತ್ತಲ್!
ಹಸುರೆತ್ತಲ್ ಕಡಲಿನಲಿ
ಹಸರ್ಗಟ್ಟಿತೊ ಕವಿಯಾತ್ಮಂ
ಹಸುರ್‌ನೆತ್ತರ್ ಒಡಲಿನಲಿ!

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** 5X1=5

I. ಕವಿಗೆ ಯಾವುವು ಹಸುರಾಗಿ ಕಾಣುತ್ತದೆ?
II. ಕವಿಯು ನೋಡಿದ ಅಡಕೆಯ ತೋಟ ಎಲ್ಲಿದೆ?
III. ಕವಿಗೆ ಹಸುರು ಹುಲ್ಲು ಹೇಗೆ ಕಾಣುತ್ತದೆ?
IV. ಆಶ್ವಯುಜ ಮಾಸದಲ್ಲಿ ಕವಿಗೆ ಭತ್ತದ ಗದ್ದೆಯು ಹೇಗೆ ಕಾಣುತ್ತದೆ?
V. ಹಸುರು ಪದ್ಯವನ್ನು ಬರೆದ ಕವಿ ಯಾರು?

## SECTION -B

**(ಅನ್ವಯಿಕ ವ್ಯಾಕರಣ ಮತ್ತು ಪಠ್ಯಪೂರಕ ಅಧ್ಯಯನ) = 20 ಅಂಕಗಳು.**

**5. ಕೆಳಗಿನ ಪ್ರತಿಯೊಂದು ಬಹುಆಯ್ಕೆಯ ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ.** **10X1=10**

I. ಕೆಳಗೆ ಕೊಟ್ಟಿರುವ ಸಂಧಿ - ಸಂಧಿ ಪದಗಳನ್ನು ಹೊಂದಿಸಿ ಬರೆಯಿರಿ.

| | |
|---|---|
| a. ಸೈನ್ಯಾಧಿಪತಿ | 1. ಯಣ್ ಸಂಧಿ |
| b. ಬೆಂಬತ್ತು | 2. ಸವರ್ಣದೀರ್ಘಸಂಧಿ |
| c. ಮನ್ವಂತರ | 3. ‘ಯ’ ಕಾರಾಗಮ ಸಂಧಿ |
| d. ಏಕೈಕವೀರ | 4. ಆದೇಶ ಸಂಧಿ |
| | 5. ವೃದ್ಧಿಸಂಧಿ |

A. a-3 b-4 c-2 d-1
B. a-5 b-1 c- 2 d-3
C. a-2 b- 1 c-4 d-5
D. a-2 b-4 c-1 d-5

II. ಈ ಕೆಳಗಿನ ಪದಗಳಲ್ಲಿ ಸಮಾಸ ಪದಗಳನ್ನು ಓದಿ ದ್ವಿಗುಸಮಾಸ ಪದಗಳನ್ನು ಹೊಂದಿಸಿ ಬರೆಯಿರಿ.

1. ಧರ್ಮರಕ್ಷಕ, ಕಾಡುಕೋಣ
2. ನಾಲ್ವಡಿ, ಮುಮ್ಮಡಿ
3. ಇಮ್ಮಾವು, ಹೊಸಗನ್ನಡ

4. ಪಂಚಲೋಹ, ಸಪ್ತ ಋಷಿಗಳು

A. 1 ಮತ್ತು 3

B. 2 ಮತ್ತು 4

C. 1 ಮತ್ತು 2

D. 3 ಮತ್ತು 4

III. 'ದೇವರನ್ನು' ಎಂಬ ಪದವು ದ್ವಿತೀಯಾ ವಿಭಕ್ತಿಯಾದರೆ **'ದೇಶದೊಳ್'** ಎಂಬ ಪದವು ಈ ವಿಭಕ್ತಿಯಾಗಿದೆ.

A. ತೃತೀಯಾ

B. ಸಪ್ತಮೀ

C. ಪ್ರಥಮಾ

D. ಚತುರ್ಥೀ

**IV.** ನೀನು, ನೀವು **:** ಮಧ್ಯಮ ಪುರುಷ ಸರ್ವನಾಮ**: :** ನಾನು, ನಾವು **: -------**

A. ಪ್ರಥಮ ಪುರುಷ ಸರ್ವನಾಮ

B. ಉತ್ತಮ ಪುರುಷ ಸರ್ವನಾಮ

C. ಪ್ರಶ್ನಾರ್ಥಕ ಸರ್ವನಾಮ

D. ಆತ್ಮಾರ್ಥಕ ನಾಮ

V. 'ಪ್ರೇಕ್ಷಕರು ನಾಟಕವನ್ನು ನೋಡುತ್ತಿದ್ದಾರೆ.' - ಈ ವಾಕ್ಯದಲ್ಲಿರುವ ಧಾತು -----

A. ಪ್ರೇಕ್ಷಕರು

B. ನಾಟಕವನ್ನು

C. ನೋಡುತ್ತಿದ್ದಾರೆ

D. ನೋಡು

VI. 'ತಂಗಳು-ತಿಂಗಳು' ಈ ಪದಗಳ ಅರ್ಥವ್ಯತ್ಯಾಸಗಳ ಕ್ರಮ ಹೀಗಿವೆ.

A. ಮಾನಸ - ಹಳೆಯದು

B. ಅಂಗಳ - ಅಂಗುಲ

C. ಮಾತೆ - ಮಾಸು

D. ಹಳಸಲು - ಮಾಸ

VII. 'ಉರ್ವಿ' - ಈ ಪದದ ಸಮಾನಾರ್ಥಕ ಪದ ------

A. ಭೂಮಿ

B. ಉಡುಪಿ

C. ಉರಗ

D. ಉಡ

VIII. ಲವನು **ವೀರಾವೇಶ**ದಿಂದ ಹೋರಾಡಲು ಕುದುರೆಯನ್ನು ಕಟ್ಟಿದನು. - ಈ ವಾಕ್ಯದಲ್ಲಿ ಗೆರೆ ಎಳೆದ ಪದವು ------- ವಾಚಕವಾಗಿದೆ.

A. ವಸ್ತು

B. ಗುಣ

C. ಪ್ರಮಾಣ

D. ದಿಗ್ವಾಚಕ

IX. ಕೆಳಗೆ ಕೊಟ್ಟಿರುವ ತತ್ಸಮ- ತದ್ಭವಗಳ ಸರಿಯಾದ ರೂಪವನ್ನು ಗುರುತಿಸಿ ಬರೆಯಿರಿ.

1. ಅಂಕುಶ - ಅಂಕುಸ
2. ಶಿರ - ಸಿರ
3. ವರ್ಷ - ಹರ್ಷ
4. ಕಲಶ - ಗೋಪುರ

ಸರಿಯಾದ ಉತ್ತರಗಳನ್ನು ಗುರುತಿಸಿ.

A. 1 ಮತ್ತು 2

B. 2 ಮತ್ತು 3

C. 3 ಮತ್ತು 4

D. 1 ಮತ್ತು 4

X. ಈ ಕೆಳಗಿನ ಪದಗಳಲ್ಲಿ ಗುಂಪಿಗೆ ಸೇರದ ಪದವನ್ನು ಗುರುತಿಸಿ ಬರೆಯಿರಿ.

A. ಪಟಪಟ

B. ಚಟಚಟ

C. ಥಳಥಳ

D. ತಿಂಡಿ - ತಿನಿಸು

6. **ಕೆಳಗಿನವುಗಳನ್ನು ಸೂಚನೆಯಂತೆ ಬರೆಯಿರಿ.** **5X1 =5**

I. ತಾಯಿ ಮಗುವನ್ನು ನೋಡಲು ತೊಟ್ಟಿಲ ಕಡೆ ಬಾಗಿದಳು. - ಈ ವಾಕ್ಯವನ್ನು ವರ್ತಮಾನಕಾಲದಲ್ಲಿ ಬರೆಯಿರಿ.

II. ಮಕ್ಳು ಮನ್ಯಾಗ ಸುಮ್ನೆ ಇರಲ್ಲ ಗಲಾಟೆ ಮಾಡ್ತಾರೆ.- ಈ ವಾಕ್ಯವನ್ನು ಗ್ರಾಂಥಿಕ ರೂಪದಲ್ಲಿ ಬರೆಯಿರಿ.

III. ಹುಡುಗರು ಮಳೆ ಬರುವಾಗ ಆಟವಾಡಿದರು . - ಈ ವಾಕ್ಯವನ್ನು ನಿಷೇಧಾರ್ಥಕ ರೂಪದಲ್ಲಿ ಬರೆಯಿರಿ

IV.ಈ ಕೆಳಗಿನ ಗಾದೆಯ ಮಾತಿನ ಅರ್ಥವನ್ನು ಬರೆಯಿರಿ.

'ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ'

ಅಥವಾ

'ದೇಶ ಸುತ್ತು ಕೋಶ ಓದು'

V. 'ಘಾಸಿಗೊಳಿಸು'- ಈ ಪದವನ್ನು ಬಳಸಿ ಸ್ವಂತ ವಾಕ್ಯ ರಚಿಸಿ ಬರೆಯಿರಿ.

**7. ಕೆಳಗಿನ ಪ್ರತಿಯೊಂದು ಬಹುಆಯ್ಕೆಯ ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ.** **5X1=5**

I ಡಾ. ಅಂಬೇಡ್ಕರ್ ಅವರ ಪ್ರಕಾರ ಸ್ವಾತಂತ್ರ್ಯ ಎರಡು ಬಗೆಯದಾಗಿರುತ್ತದೆ; ಪೌರ ಸ್ವಾತಂತ್ರ್ಯ ಹಾಗೂ ರಾಜಕೀಯ ಸ್ವಾತಂತ್ರ್ಯ. ಪೌರ ಸ್ವಾತಂತ್ರ್ಯ ಈ ಅಂಶಗಳನ್ನು ಹೊಂದಿರುತ್ತದೆ. (೧) ಚಲವಲನ ಸ್ವಾತಂತ್ರ್ಯ -ಸೂಕ್ತ ನ್ಯಾಯಾಂಗ ಕ್ರಮವಿಲ್ಲದೆ ವ್ಯಕ್ತಿಯನ್ನು ಬಂಧಿಸುವಂತಿಲ್ಲದ್ದು, (೨) ವಾಕ್ ಸ್ವಾತಂತ್ರ್ಯ (ಆಲೋಚನೆ, ಓದು, ಬರೆಹ, ಚರ್ಚೆ ಇವುಗಳ ಸ್ವಾತಂತ್ರ್ಯ ಇದರಲ್ಲೇ ಸೇರುತ್ತದೆ); ಮತ್ತು (೩) ಕ್ರಿಯಾ ಸ್ವಾತಂತ್ರ್ಯ

ಈ ಕೆಳಗಿನ ಸ್ವಾತಂತ್ರ್ಯ ಗಳು ಪೌರ ಸ್ವಾತಂತ್ರ್ಯಕ್ಕೆ ಸಂಬಂಧಿಸಿದವುಗಳಾಗಿವೆ.

A. ಚಲವಲನ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ, ಕ್ರಿಯಾ ಸ್ವಾತಂತ್ರ್ಯ
B. ಚಲವಲನ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ, ರಾಜಕೀಯ ಸ್ವಾತಂತ್ರ್ಯ
C. ಸಾಮಾಜಿಕ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ, ಕ್ರಿಯಾ ಸ್ವಾತಂತ್ರ್ಯ
D. ಚಲವಲನ ಸ್ವಾತಂತ್ರ್ಯ, ಕ್ರಿಯಾ ಸ್ವಾತಂತ್ರ್ಯ ನೈತಿಕ ಸ್ವಾತಂತ್ರ್ಯ

II ಕೆಟ್ಟ ಅಕ್ಷರದ ಬರೆವಣಿಗೆ ಅಪಕ್ವ ಮತ್ತು ಅಪೂರ್ಣ ಶಿಕ್ಷಣದ ಚಿಹ್ನೆ ಎಂದು ನಾನು-ಅರಿತೆನು. ಈಚೆಗೆ ನನ್ನ ಬರೆಹವನ್ನು ತಿದ್ದಿಕೊಳ್ಳಬೇಕೆಂದು ಪ್ರಯತ್ನಿಸಿದೆ. ಸುಟ್ಟಮಡಕೆಗೆ ಹಸಿಮಣ್ಣನ್ನು ಮೆತ್ತಲು ಸಾಧ್ಯವೆ? ಆ ವೇಳೆಗೆ ಕಾಲ ಮೀರಿ ಹೋಗಿತ್ತು.- ಈ ಮಾತು ಗಾಂಧೀಜಿಯವರು ಹೇಳಿರುವುದು ಇದನ್ನು ಕುರಿತು

A. ಸುಂದರ ಬರೆವಣಿಗೆಯನ್ನು
B. ಬರೆವಣಿಗೆಯನ್ನು ತಿದ್ದಿಕೊಳ್ಳಬೇಕೆಂಬುದು
C. ಕೆಟ್ಟ ಅಕ್ಷರರಗಳನ್ನು ಹಾಗೆ ಮುಂದುವರಿಸಬೇಕೆಂದು
D. ಮಡಕೆಗೆ ಹಸಿಮಣ್ಣು ಮೆತ್ತುವುದಕ್ಕಾಗಿ

III. “ಇದು ಬಹಳ ಪೂಜ್ಯನೀಯವಾದ ಮಣ್ಣು, ಜಲಿಯನ್ ವಾಲಾಬಾಗ್ ಹತ್ಯಾಕಾಂಡದಲ್ಲಿ ಹುತಾತ್ಮರಾದವರ ರಕ್ತದಿಂದ ಈ ಮಣ್ಣು ಒದ್ದೆಯಾಗಿದೆ; ಈ ವಾಕ್ಯವು

A. ಭಗತ್ ಸಿಂಗ್ ನ ಸ್ವಾತಂತ್ರ್ಯ ಪ್ರೇಮವನ್ನು ನೆನಪಿಸುತ್ತದೆ.
B. ಗಾಂಧೀಜಿಯವರು ಸ್ವಾತಂತ್ರ್ಯದ ದಿನಗಳನ್ನು ನೆನಪಿಸುತ್ತದೆ.
C. ವಿವೇಕಾನಂದರ ಆದರ್ಶ ಮೌಲ್ಯವನ್ನು ನೆನಪಿಸುತ್ತದೆ.
D. ಡಾ. ಅಂಬೇಡ್ಕರ್ ಅವರ ಜೀವನ ಚರಿತ್ರೆಯನ್ನು ನೆನಪಿಸುತ್ತದೆ.

IV. ಕಮ್ಮಾರನ ಕುಲುಮೆ ಉರಿಯಲಿಲ್ಲ
ಕುಂಬಾರನ ತಿಗುರಿ ತಿರುಗಲಿಲ್ಲ
ನೇಕಾರನ ಮಗ್ಗ ಉಸಿರಾಡಲಿಲ್ಲ
ಕೇರಿಯ ಮಾರನ ಒಲೆ ಹೊತ್ತಲಿಲ್ಲ - ಈ ಮೇಲಿನ ಪದ್ಯದಲ್ಲಿ ತಿಳಿಸಿರುವ ವೃತ್ತಿಗಾರರ ಸಾಮಗ್ರಿಗಳನ್ನು ತಿಳಿಸಿ.

1. ಕಮ್ಮಾರ - ಮಡಿಕೆ, ಮಗ್ಗ

2. ಕುಂಬಾರ - ಕುಲುಮೆ, ಮಡಿಕೆ
3. ನೇಕಾರ - ಮಗ್ಗ, ಕುಲುಮೆ
4. ಕೇರಿಯ ಮಾರ - ಒಲೆ

A. 1. ಮತ್ತು 2 ಮಾತ್ರ ಸರಿ
B. 1. ಮತ್ತು 3 ಮಾತ್ರ ಸರಿ
C. 1. ಮತ್ತು 4 ಮಾತ್ರ ಸರಿ
D. 4 ಮಾತ್ರ ಸರಿ

V. ಚಂದನವ ಕಡಿದು ಕೊರೆದು ತೇದೊಡೆ
ನೊಂದೆಂದು ಕಂಪ ಬಿಟ್ಟಿತ್ತೆ?
ತಂದು ಸುವರ್ಣವ ಕಡಿದೊರೆದಡೆ ಬೆಂದು ಕಳಂಕ ಹಿಡಿಯಿತ್ತೆ?
ಸಂದುಸಂದನು ಕಡಿದು ಕಬ್ಬನು ತಂದು ಗಾಣದಲ್ಲಿಕ್ಕಿ ಅರೆದಡೆ - ಮೇಲಿನ ಸಾಲುಗಳಲ್ಲಿ ಅಕ್ಕಮಹಾದೇವಿಯವರು ಹೇಳಿರುವ ಸಹಜ ಗುಣವಿರುವ ವಸ್ತುಗಳು

A. ಚಂದನ, ಸುವರ್ಣ, ಬೇಯು
B. ಚಂದನ, ಕೊರೆ, ಕಂಪು
C. ಚಂದನ, ಸುವರ್ಣ, ಕಬ್ಬು
D. ಮರ, ಗಿಡ, ಬಳ್ಳಿ

**PART – 2 (40-ಅಂಕಗಳು)**

**SECTION -C**

**(ಬರವಣಿಗೆ ಕೌಶಲ್ಯ) = 12 ಅಂಕಗಳು**

**8.** ನಿಮ್ಮ ಹತ್ತಿರದ ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರು ಪ್ಲಾಸ್ಟಿಕ್ ವಸ್ತುಗಳನ್ನು ಹರಡುತ್ತಿದ್ದು ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸುವಂತೆ ಪರಿಸರ ಸಂರಕ್ಷಣಾಧಿಕಾರಿಗಳಿಗೆ ಒಂದು ಮನವಿ ಪತ್ರ ಸಲ್ಲಿಸಿ. **1X4=4**

**ಅಥವಾ**

ದಿನಾಂಕ 10-04-2025 ರ ವಿಜಯವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾದ ಜಾಹೀರಾತಿನ ಮೇರೆಗೆ ಕಾಗದದ ಕಾರ್ಖಾನೆಯಲ್ಲಿ ಖಾಲಿ ಇರುವ ಕಿರಿಯ ಸಹಾಯಕ ಇಂಜಿನಿಯರ್ ಹುದ್ದೆಗೆ, ನಿರ್ದೇಶಕರು, ಕಾಗದದ ಕಾರ್ಖಾನೆ, ಭದ್ರಾವತಿ. ಇವರಿಗೆ ಒಂದು ಅರ್ಜಿಯನ್ನು ಸಲ್ಲಿಸಿ.

9. ನಿಮ್ಮ ಬಡಾವಣೆಯ ಮುಖಂಡರು ಅಲ್ಲಿನ ಕೊಳಚೆ ಪ್ರದೇಶಕ್ಕೆ ಭೇಟಿ ನೀಡಿ ಅದರ ಅಭಿವೃದ್ಧಿಯ ಬಗ್ಗೆ ಕೈಗೊಂಡ ಕ್ರಮಗಳ ಕುರಿತು ಒಂದು ವರದಿ ಸಿದ್ಧಪಡಿಸಿ. **1X4=4**

**10. ಈ ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ.**

I. ಪಶ್ಚಿಮ ಘಟ್ಟಗಳ ರಕ್ಷಣೆ **1X4=4**

II. ಮಹಿಳಾ ಸಬಲೀಕರಣ

III. ಸ್ವಚ್ಛಭಾರತ ಅಭಿಯಾನ

**SECTION -D**

**(ಪಠ್ಯಗಳ ಅಧ್ಯಯನ) =28 ಅಂಕಗಳು**

**11. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿರಿ.** **4X2=8**

I. ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು?

II. ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳೇನು?

III. ಅರಿಯದವರೊಡನೆ ಸಂಗ ಮಾಡಿದರೆ ಆಗುವ ಪರಿಣಾಮವೇನು?

IV. ಪುಟ್ಟಿಯ ಪ್ರಶ್ನೆಗಳೇನು?

**12. ಈ ಕೆಳಗಿನ ಪ್ರಶ್ನೆಗಳಿಗೆ 5-6 ವಾಕ್ಯಗಳಲ್ಲಿ ಉತ್ತರಿಸಿ.** **2X3= 6**

I. ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು?

II. ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ ?

**13. ಈ ಕೆಳಗಿನ ಪ್ರಶ್ನೆಗಳಿಗೆ ಸಂದರ್ಭಹಾಗೂ ಸ್ವಾರಸ್ಯದೊಡನೆ ವಿವರಿಸಿ.** **2X3= 6**

**I.** "ಸಾಮಾಜಿಕ ಕಾನೂನುಗಳ ಹರಿಕಾರ"

ಅಥವಾ

"ದೇವರೆ, ಮರ ಹತ್ತುವಷ್ಟು ಅವಕಾಶ ಕರುಣಿಸು."

**II.** "ಜೀವ ಸತ್ತು ಹೋಗುವುದು ಗೊತ್ತ"

ಅಥವಾ

"ಪ್ರೀತಿಯ ಹಣತೆಯ ಹಚ್ಚೋಣ"

**14. ಈ ಕೆಳಗಿನ ಪ್ರಶ್ನೆಗಳಿಗೆ 8-10 ವಾಕ್ಯಗಳಲ್ಲಿ ಉತ್ತರಿಸಿ.** **1X4=4**

I. ವಿಶ್ವೇಶ್ವರಯ್ಯ ಅವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.

ಅಥವಾ

ಶಬರಿಯ ಚಿಂತೆ ಹಿಂಗಿ ಹೋದ ಸ್ವಾರಸ್ಯವನ್ನು ವಿವರಿಸಿ.

**15. ಈ ಕೆಳಗಿನ ಪ್ರಶ್ನೆಗಳಿಗೆ 8-10 ವಾಕ್ಯಗಳಲ್ಲಿ ಉತ್ತರಿಸಿ.** **1X4=4**

I. ನಾವು ಯಾವ ಸಂಕಲ್ಪವನ್ನು ಕೈಗೊಳ್ಳಬೇಕೆಂಬುದು ಕವಿ ಶಿವರುದ್ರಪ್ಪನವರ ಆಶಯವಾಗಿದೆ?

ಅಥವಾ

ಕರ್ಣನಿಗೆ ಶ್ರೀಕೃಷ್ಣನು ನೀಡಿದ ಆಮಿಷಗಳೇನು? ವಿವರಿಸಿ.

************************************************************